# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 21.03.2022 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ, ಕಂದಾಯ ವಸೂಲಿಗಾರರು ಮತ್ತು ಕಾರ್ಯದರ್ಶಿಗಳು,
3. ಶ್ರೀ. ದೀಪಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ. ಶ್ರೀನಿವಾಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ಪಶುಪಾಲನೆ.
5. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು.
6. ಮಣಿ ಮೇಘಾಲಯ್ಯೆ, ಕಿರಿಯ ಆರೋಗ್ಯ ಪರಿವೀಕ್ಷರು
7. ನಾರಾಯಣಸ್ವಾಮಿ, ಮೇಲ್ವಿಚಾರಕರು
8. ನಾಗರಾಜು, ಸೂಪರ್‌ವೈಸರ್
9. ಮುತ್ಯಾಲಪ್ಪ, ಸೂಪರ್‌ವೈಸರ್
10. ದಾಕ್ಷಾಯಿಣಿ ಲಿಂಕ್ ವರ್ಕರ್
11. ಪ್ರಮೀಳ ಲಿಂಕ್ ವರ್ಕರ್
12. ನವೀನ್, ವಾರ್ಡ್ ಮಾರ್ಷಲ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ವಾರ್ಡ್‌ನಲ್ಲಿ ಕಸ ವಿಂಗಡಣೆ, ಕಸ ವಿಲೇವಾರಿ ಮುಂತಾದ ಘನತ್ಯಾಜ್ಯ ನಿರ್ವಹಣಾ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಲಯಿತು. ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಎಲ್ಲಾ ಮೇಲ್ವಿಚಾರಕರು, ಲಿಂಕ್ ವರ್ಕರ್ಸ್ ಮತ್ತು ವಾರ್ಡ್ ಮಾರ್ಷಲ್‌ಗಳ ಜೊತೆಗೂಡಿ ವಾರ್ಡ್ ಪೂರ್ತಿ ಕಸ ಸಂಗ್ರಹಣೆ, ಕಸ ಬೇರ್ಪಡಿಸುವಿಕೆ ಮತ್ತು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುತ್ತಿರುವುದನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಇದೇ ರೀತಿ

Scanned with CamScanner

ವಾರ್ಡ್‌ನ ಎಲ್ಲಾ ಬ್ಲಾಕ್ ಸ್ಪಾಟ್‌ಗಳನ್ನು ಮತ್ತು ಕಸ ವಿಲೇವಾರಿಗಳನ್ನು ಯಾವುದೇ ದೂರು ಬರದಂತೆ ನಿರ್ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಿದರು.

**ಕ್ರಮ: ಅರಣ್ಯ ಇಲಾಖೆ (ರಾಜರಾಜೇಶ್ವರಿನಗರ ವಲಯ)**

ಶ್ರೀ.ಮಂಜುನಾಥ್ ರವರು ಮಾತನಾಡಿ ಗೋಪಿನಾಥ್ ಫ್ಲಾಟ್, 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಹಾಗೂ ಗೀತಾ ಶಾಲೆ ಹತ್ತಿರ ಕಾರ್ಯನಿರ್ವಹಿಸುತ್ತಿದ್ದ ವಾಟರ್ ಮೋಟರ್ ಅನ್ನು ತೆರವುಗೊಳಿಸಿದ್ದು, ಅದನ್ನು ಹೊಸದಾಗಿ ಹಾಕಿಕೊಡಬೇಕೆಂದು ಈ ಹಿಂದಿನ ಸಭೆಯಲ್ಲಿ ಕೋರಿದ್ದು, ಈ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ಶ್ರೀ.ಮಂಜುನಾಥ್ ರವರು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)**

**ಶ್ರೀ.ಸುಂದರ್ ಮೊ: 9060519090**

ಶುದ್ಧ ಕುಡಿಯುವ ನೀರಿನ ಘಟಕಗಳ ಎಲ್ಲಾ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಿ ಯೋಗ್ಯ ನೀರನ್ನು ಕುಡಿಯಲು ಸಾರ್ವಜನಿಕರಿಗೆ ಸರಬರಾಜು ಮಾಡಲು ಸಭೆಯಲ್ಲಿ ಈ ಹಿಂದೆ ತೀರ್ಮಾನಿಸಲಾಗಿತ್ತು.

**ಕ್ರಮ: ಆರೋಗ್ಯ ಇಲಾಖೆ (ನಂದಿನಿ ಲೇಔಟ್) ಪ್ರಾಥಮಿಕ ಕೇಂದ್ರ.**

ಶ್ರೀ.ಆನಂದ್ ರವರು ಮಾತನಾಡಿ ಜ್ಯೆಭುವನೇಶ್ವರಿನಗರದಲ್ಲಿ ಹೊಸದಾಗಿ ಸ್ಟ್ರೀಟ್ ಲೈಟ್‌ಗಳನ್ನು ಹಾಕಿಕೊಡಬೇಕೆಂದು ಕೋರಿದರು.

**ಕ್ರಮ: ವಿದ್ಯುಚ್ಛಕ್ತಿ ಇಲಾಖೆ (ರಾಜರಾಜೇಶ್ವರಿನಗರ),**

ಡಾ॥ ರೇಣುಕಪ್ರಸಾದ್ ರವರು ಮಾತನಾಡಿ ವಾರಕ್ಕೊಮ್ಮೆಯಾದರೂ ಆಸ್ಪತ್ರೆ ಆವರಣವನ್ನು ಪೌರ ಕಾರ್ಮಿಕರಿಂದ ಸ್ವಚ್ಛಗೊಳಿಸಿಕೊಡಬೇಕೆಂದು ಈ ಹಿಂದೆ ಕೋರಿದ್ದು, ಅದನ್ನು ಕಾರ್ಯಗತಗೊಂಡಿದೆ ಎಂದು ತಿಳಿಸಿದರು.

**ಕ್ರಮ: ಆರೋಗ್ಯ ಇಲಾಖೆ (ಕಿರಿಯ ಆರೋಗ್ಯ ಪರಿವೀಕ್ಷಕರು), ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ).**

Scanned with CamScanner

ಕಾವೇರಿ ನಗರದಲ್ಲಿ ವಿದ್ಯುಚ್ಛಕ್ತಿ ಕಂಬದಲ್ಲಿ ಲೈನ್ ಗಳು ಜೋತು ಬಿದ್ದಿದ್ದು ಅದನ್ನು ಸರಿಪಡಿಸಿಕೊಡಬೇಕೆಂದು ಈ ಹಿಂದೆ ಕೋರಿದ್ದು ಶ್ರೀಮತಿ.ಕವಿತಾ ರವರು ಮಾತನಾಡಿ ಸಮಸ್ಯೆ ಬಗೆಹರಿದಿದೆ ಎಂದು ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ (ಲಗ್ಗೆರೆ) ವಿಭಾಗ,

ಶ್ರೀ.ಮಂಜುನಾಥ್ ರವರು ಮಾತನಾಡುತ್ತಾ, ಗೋಪಿನಾಥ್ ಪ್ಲಾಟ್‌ಗಳಲ್ಲಿ 5 ದಿನಕ್ಕೊಮ್ಮೆ ಕಾವೇರಿ ನೀರನ್ನು ಬಿಡುತ್ತಿದ್ದು, ವಾರಕ್ಕೆ ಎರಡು ಬಾರಿಯಾದರೂ ಕಾವೇರಿ ನೀರನ್ನು ಬಿಡಬೇಕೆಂದು ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯು.ಎಸ್.ಎಸ್.ಬಿ)

ವಂದನೆಗಳೊಂದಿಗೆ ಸಭೆಯನ್ನು ಮಾನ್ಯ ಕಾರ್ಯದರ್ಶಿಗಳು ಮುಕ್ತಾಯಗೊಳಿಸಿದರು.

Nirmala K.
(ಶ್ರೀಮತಿ. ನಿರ್ಮಲ)
ಕಂದಾಯ ವಸೂಲಿಗಾರರು
ಅಧಿಕಾರಿಗಳು
ಮತ್ತು ಕಾರ್ಯದರ್ಶಿ

(ಡಾ॥ ಎಂ. ಜಿ. ಹಳ್ಳಿ ಶಿವರಾಮ್) 21/03/22
ಅಧ್ಯಕ್ಷರು ಮತ್ತು ನೋಡಲ್

Scanned with CamScanner